
# ಬೆಳಕಿನ ಸಂಚಲನ

ಸಂ 1, ಸಂ 8 ಡಿಸೆಂಬರ್ 2013

## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

“ನಾನು ಒಬ್ಬ ವ್ಯಕ್ತಿಗೆ ಬೆಳಕನ್ನು ಕಳುಹಿಸಬಹುದೆ?” ಎಂದು ಕೆಲವು ಸಲ ಜನರು ಕೇಳುತ್ತಾರೆ. ಒಬ್ಬ ವ್ಯಕ್ತಿ ಸಂಕಟದಲ್ಲಿದ್ದಾಗ, ಸಹಾಯದ ಅವಶ್ಯಕತೆ ಇದ್ದಾಗ, ಯಾಕಾಗಬಾರದು? ನಾವು ವ್ಯಕ್ತಿಗಳಿಗೆ, ಸಮೂಹಗಳಿಗೆ ಮತ್ತು ಸ್ಥಳಗಳಿಗೆ ಬೆಳಕನ್ನು ಕಳುಹಿಸಬಹುದು. ಬೆಳಕನ್ನು ಕಳುಹಿಸುವಾಗ ನೀವು ಒಂದು ಉದ್ದೇಶವನ್ನು ಸಹ ಇಟ್ಟುಕೊಳ್ಳಬಹುದು. “ದಯವಿಟ್ಟು ಅವರಿಗೆ ಸಹಾಯ ಮಾಡು” ಎಂದು ಬೆಳಕನ್ನು ಪ್ರಾರ್ಥಿಸಿ, ಬೆಳಕನ್ನು ಒಂದು ಕಿರಣದೋಪಾದಿಯಲ್ಲಿ ಕಳುಹಿಸಿ. ಬೆಳಕನ್ನು ಕಳುಹಿಸುವಾಗಲೆಲ್ಲಾ ಕನಿಷ್ಠ 7 ನಿಮಿಷಗಳ ಕಾಲ ಕಳುಹಿಸಿ.

“7 ನಿಮಿಷಗಳು ಏಕೆ?” ಎಂದು ಒಬ್ಬರು ಕೇಳಿದರು. ಅದು ಒಂದು ಏಕಮಾನ (unit) ಎಂದು ಲೈಟ್ ಮಾಸ್ಟರ್‌ಗಳು ಪ್ರಯೋಗದಿಂದ ಕಂಡುಹಿಡಿದಿದ್ದಾರೆ. ಅದಕ್ಕಿಂತ ಕಡಿಮೆ ಸಮಯವಾದರೆ ಏನೂ ಪರಿಣಾಮಬೀರುವುದಿಲ್ಲ. 7 ನಿಮಿಷಗಳು ಮಾತ್ರ ಎಂದಲ್ಲ, ಕನಿಷ್ಠ 7 ನಿಮಿಷಗಳೆಂದು ಅವರು ಹೇಳಿದ್ದಾರೆ. ವ್ಯಕ್ತಿಗಳಿಗೆ, ಪ್ರವಾಹ ಮತ್ತು ಬರ ಪೀಡಿತ ಪ್ರದೇಶಗಳಿಗೆ ಬೆಳಕನ್ನು ಕಳುಹಿಸಿ. ಬೆಳಕನ್ನು ಯಾವುದೇ ಉದ್ದೇಶಕ್ಕೆ, ಯಾವುದೇ ಒಳ್ಳೆಯ ಉದ್ದೇಶಕ್ಕೆ ನೀವು ಉಪಯೋಗಿಸಬಹುದು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ವಿಶೇಷ ಘಟನೆಗಳ ಮಾಸವಾದ ನವೆಂಬರ್‌ನಲ್ಲಿ ನಮ್ಮ ಕಾರ್ಯಕರ್ತರು 233 ಶಾಲೆಗಳಿಗೆ ಭೇಟಿನೀಡಿ 91000 ಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಲು ಸಹಾಯ ಮಾಡಿದರು. 4 ವರ್ಷಗಳ ಹಿಂದೆ ನಾವು ವಿದ್ಯಾರ್ಥಿಗಳಿಗೆ ಲೈಟ್ ಚಾನಲಿಂಗ್ ಕಲಿಸಲು ಪ್ರಾರಂಭಿಸಿದಾಗಿನಿಂದ ಇಲ್ಲಿಯವರೆಗೆ 4437 ಶಾಲೆಗಳ 25 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದನ್ನು ಕಲಿತಿದ್ದಾರೆ. ಈ ಅದ್ಭುತವಾದ ಮಕ್ಕಳು ಚಾನಲ್ ಮಾಡಿದ ಬೆಳಕು ನಮ್ಮ ಸುತ್ತಲೂ ಸದ್ದಿಲ್ಲದೇ ಆಗುತ್ತಿರುವ ಹಲವಾರು ಸಕಾರಾತ್ಮಕ ಬದಲಾವಣೆಗಳನ್ನು ತೀವ್ರಗೊಳಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಮಕ್ಕಳು, ಶಿಕ್ಷಕರು ಮತ್ತು ಕಾರ್ಯಕರ್ತರುಗಳ ಲೈಟ್ ಚಾನಲಿಂಗ್ ಅನುಭವಗಳನ್ನೊಳಗೊಂಡ ಪುಸ್ತಕದ 2ನೇ ಸಂಪುಟವನ್ನು ಗುರೂಜಿಯವರ ಮೊದಲ ಮಹಾಸಮಾಧಿಯ ದಿನದಂದು ಬಿಡುಗಡೆಮಾಡಲಾಯಿತು. ಈ ಪುಸ್ತಕವನ್ನು ನಮ್ಮ ವೆಬ್‌ಸೈಟ್‌ನಲ್ಲಿ ಉಚಿತವಾಗಿ ಪಡೆಯಬಹುದು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಉನ್ನತ ಲೋಕಗಳಿಂದ ಬಂದ ಕೃಪೆ ಮತ್ತು ಮಾರ್ಗದರ್ಶನವಿಲ್ಲದಿದ್ದರೆ ಕೇವಲ 4 ವರ್ಷಗಳಲ್ಲಿ 25 ಲಕ್ಷಕ್ಕೂ ಹೆಚ್ಚು ಜನರು ಲೈಟ್ ಚಾನಲ್ ಮಾಡಿರುವುದು ಸಾಧ್ಯವಾಗುತ್ತಿರಲಿಲ್ಲ. ವಾಸ್ತವವಾಗಿ, ಈ ಪ್ರಮುಖ ಮೈಲಿಗಲ್ಲನ್ನು ತಲುಪಲು, ಆ್ಯಸ್ಟ್ರಲ್ ಮಾಸ್ಟರ್‌ಗಳು ಸಂಪೂರ್ಣವಾಗಿ ನಮಗೆ ಸಹಾಯ ಮತ್ತು ಪ್ರೋತ್ಸಾಹ ನೀಡಿದ್ದಾರೆ. ಈ ಕಾರ್ಯ ಬಹು ದೊಡ್ಡ ಆ್ಯಸ್ಟ್ರಲ್ ಕಾರ್ಯದ ವಿಸ್ತರಿತ ಭಾಗ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಈ ಭೂಮಿಯ ಎಲ್ಲಾ ಚಟುವಟಿಕೆಗಳನ್ನು, ನಮ್ಮ ಈ ಪ್ರಪಂಚದ ಬಗ್ಗೆ ವಿಶೇಷವಾದ ಕಾಳಜಿಯಿರುವ ಉನ್ನತ ಶಕ್ತಿಗಳು ನೋಡಿಕೊಳ್ಳುತ್ತವೆ.

ಹೊಸ ಯುಗದ ಕನಸನ್ನು ತಮ್ಮ ಹೃದಯದಲ್ಲಿ ಹೊತ್ತಿರುವ 100ಕ್ಕೂ ಹೆಚ್ಚು ಕಾರ್ಯಕರ್ತರ ಸಮರ್ಪಣೆ ಮತ್ತು ಶಿಸ್ತಿನ ಪ್ರಯತ್ನಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದು ಕೂಡ ಅತಿ ಮುಖ್ಯ. ಅವರ ನಿಸ್ವಾರ್ಥ ಕೆಲಸವು ಎಲ್ಲರ ಹೃದಯವನ್ನು ಮುಟ್ಟುತ್ತದೆ.

ಈ ಮಹಾ ಕ್ರಾಂತಿಯ ಭಾಗವಾಗಿರುವುದಕ್ಕಾಗಿ ನಾವು ಹೆಮ್ಮೆ ಪಡಬೇಕು.


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.

ಫೋನ್ : (080) 2846 5280, 99000 75280 (10 AM to 4 PM)

ಇ–ಮೇಲ್ : info@lightagemasters.com info@lightchannels.com

ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ, 4ನೇ 'T' ಬ್ಲಾಕ್, ಜಯನಗರ
☎ 9972888033 ಕಾರ್ತಿಕ್ ಎನ್.

ಗುರುವಾರ (ಸಂಜೆ 6:30 - 7:00)
ನಂ. 312, ಹಂತ-4, ಗೋಲ್ಡನ್ ಪಾರ್ಕ್
ಅಪಾರ್ಟ್‌ಮೆಂಟ್, ಕೆ.ಸಿ.ಡಿ.ಸಿ. ಮುಖ್ಯರಸ್ತೆ,
ಬೊಮ್ಮನಹಳ್ಳಿ.
☎ 9886437042 ಡಾ. ರವಿಂದರ್ ಸಿಂಗ್ ಗೌರ್

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 5:30 - 6:00)
ಶ್ರೀ ರಂಗ ಕಲಾಕ್ಷೇತ್ರ, 13ನೇ ಅಡ್ಡರಸ್ತೆ,
2ನೇ ಹಂತ, ಇಂದಿರಾನಗರ
☎ 9902844667 ಶ್ರೀಮತಿ ಮಂಜು ಮಹೇಶ್ವರಿ

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್, ಆಂಜನೇಯ ದೇವಸ್ಥಾನದ
ಎದುರು, ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಮಕ್ಕಳ ದಿನಾಚಾರಣೆಯ ದಿನದಂದು ತಪೋನಗರದ ವಿಶ್ವ ಚೇತನ ಮಂದಿರದಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.
- ಡಿಸೆಂಬರ್ 18, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ಮೈಸೂರು, ಬೆಂಗಳೂರು, ಚೆನ್ನೈ, ಮುಂಬೈ ಮತ್ತು ಹೈದರಾಬಾದ್‌ಗಳಲ್ಲಿರುವ 107 ಶಾಲೆಗಳಿಗೆ ಒಂದೇ ದಿನದಲ್ಲಿ ಭೇಟಿ ನೀಡಿ 62,000 ಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಮಾಡುವುದನ್ನು ಕಲಿಸಿಕೊಟ್ಟರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4437 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 25.17 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1140 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.18 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ನನ್ನ ಪ್ರೀತಿಯು ಎಂದೂ ಕೊನೆಯಾಗಲಾರದು

**ಪದ್ಮಜ ಬಾಲಾಜಿ**

**ಅನು: ವಿಕಾಸ್ ಕಾರಂತ್**

ಶೂನ್ಯದಿಂದ ಹೊಳೆದ ಕೆಲವು ಶಬ್ದಗಳಿಗಾಗಿ ತಕ್ಷಣವೇ ಅಂತರ್ಜಾಲದಲ್ಲಿ ಹುಡುಕಾಡಿದಾಗ ಅದು "ವೈಟ್ ಲಯನ್ ರಾಕ್ ಬ್ಯಾಂಡ್ (White Lion Rock Band)" ಹಾಡಿದ ಸುಂದರವಾದ ಹಳೆಯ ಪ್ರೇಮ ಗೀತೆ ಎಂದು ಗೊತ್ತಾಯಿತು....

....ನನ್ನ ಕೈಯನ್ನು ಹಿಡಿದುಕೋ ನಾನು ನಿನಗೆ ಮಾರ್ಗದರ್ಶಿಯಾಗುವೆ,
ನಿನ್ನ ಜೀವನದುದ್ದಕ್ಕೂ ನಾನು ನಿನ್ನ ಜೊತೆಯಿರುವೆ,
ಸಾವು ನಮ್ಮನ್ನು ಬೇರ್ಪಡಿಸುವ ತನಕ ನಾನು ನಿನ್ನ ಗೆಳೆಯನಾಗಿರುವೆ,
ನನ್ನ ಪ್ರೀತಿ ಎಂದೂ ಕೊನೆಯಾಗದು ಸಾವು ನಮ್ಮನ್ನು ಬೇರ್ಪಡಿಸುವ ತನಕ ....

* * *

ಭಾವನಾತ್ಮಕವಾಗಿ ಜರ್ಜರಿತಳಾದ ಒಬ್ಬ ಮಹಿಳೆಯಿಂದ ಬಂದ ಫೋನ್ ಕರೆ ನನ್ನನ್ನು ಚಕಿತಗೊಳಿಸಿತು. ಅದು ದೂರದ ಊರಿನಿಂದ ಬಂದ ಅನಿರೀಕ್ಷಿತ ಕರೆಯಾಗಿತ್ತು. ನಮ್ಮ ಒಂದು ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದ ಅವರ ಗೆಳತಿಯ ಪ್ರತಿಕ್ರಿಯೆಯ ಆಧಾರದ ಮೇಲೆ, ಈ ಮಹಿಳೆ ತಮ್ಮ ಸಂಕಷ್ಟವನ್ನು ನನ್ನಲ್ಲಿ ವಿಶ್ವಾಸವಿಟ್ಟು ಹೇಳಿಕೊಂಡರು ಹಾಗೂ ನನ್ನ ಸಲಹೆ ಮತ್ತು ಮಾರ್ಗದರ್ಶನ ಕೋರಿದರು.

ಅಪರಿಚಿತಳಾದ ನನ್ನಲ್ಲಿ ಆಕೆ ಇಟ್ಟ ನಂಬಿಕೆ ಮತ್ತು ವಿಶ್ವಾಸ ನನ್ನ ಅಂತರಾಳವನ್ನು ಮುಟ್ಟಿತು. "ನಾನು ಮಾರ್ಗದರ್ಶಿಯಲ್ಲ ಕೇವಲ ಬೆಳಕಿನ ಸಂದೇಶವಾಹಕಳು ಮಾತ್ರ. ನಾನು ಬೆಳಕಿನ ಸಂದೇಶವಾದ ಪ್ರೀತಿಯನ್ನು ಹರಡುತ್ತೇನೆ ಮತ್ತು ನಾವು ಬೆಳೆಯುತ್ತಾ ನಮ್ಮ ಅಂತಃಶಕ್ತಿಯನ್ನು ಬೆಳಗಬೇಕು" ಎಂದು ಸಾವಧಾನವಾಗಿ ಆಕೆಗೆ ತಿಳಿಹೇಳಿದೆ.

ಒಂದು ವರ್ಷದ ಹಿಂದೆ ನನ್ನ ಆಧ್ಯಾತ್ಮಿಕ ತಂದೆ ಶರೀರ ತ್ಯಜಿಸಿದಾಗ ನನಗೆ ಪ್ರಪಂಚವೇ ಶೂನ್ಯವಾದಂತೆ ಭಾಸವಾದ ದಿನವನ್ನು ಈ ಘಟನೆ ಜ್ಞಾಪಿಸಿತು. ನೆರೆದಿದ್ದ ಪ್ರೇಕ್ಷಕರ ಮುಂದೆ ಪ್ರಜ್ವಲಿಸುತ್ತಿದ್ದ ಜ್ವಾಲೆಯು ಎಲ್ಲಾ ದಿಕ್ಕುಗಳಿಂದ ಬರುತ್ತಿದ್ದ ಮೂಕರೋಧನವನ್ನು ಗಮನಿಸದೆ ತನ್ನ ಕರ್ತವ್ಯದ ಕರೆಯನ್ನು ಸಮರ್ಪಕವಾಗಿ ಮಾಡುತ್ತಾ ಗುರೂಜಿಯವರ ಪವಿತ್ರ ದೇಹವನ್ನು ತನ್ನೊಳಗೆ ಲೀನಗೊಳಿಸಿತು. ಪ್ರಾಮಾಣಿಕವಾಗಿ, ಇದೊಂದು ಸಹಿಸಲಾಗದ ನಷ್ಟ. ನನ್ನ ಹೃದಯದ ಬಡಿತವೂ ಅವರ ಹೃದಯ ಬಡಿತದೊಂದಿಗೆ ನಿಂತುಹೋಗಬಹುದು ಎಂದು ನಿರೀಕ್ಷಿಸಿದ್ದೆ. ಆದರೆ ಅಂತಹ ಯಾವ ಪವಾಡವೂ ನಡೆಯಲಿಲ್ಲ.

ನಿಜವಾಗಿಯೂ ಗುರುಗಳ ಪವಿತ್ರ ಶರೀರವನ್ನು ಲೀನಗೊಳಿಸಿದ ಅಗ್ನಿಯು ನನಗೆ ಗುರುಗಳ ಬೆಳಕು, ಸಿದ್ಧಾಂತ, ಭೋದನೆಗಳು ಮತ್ತು ಕನಸುಗಳ ಬಗ್ಗೆ ಇರುವ ನಂಬಿಕೆಯನ್ನು ಬಲಗೊಳಿಸಿತು. ಅದಕ್ಕಿಂತಲೂ ಹೆಚ್ಚಾಗಿ ನನ್ನ ಸುಪ್ತ ವಾಗ್ದಾನಕ್ಕೆ ಸಾಕ್ಷಿಯಾಯಿತು.

* * *

ಒಂದು ದಿನ, ನನ್ನ ಜೊತೆಗಾರರೊಂದಿಗೆ ಲೈಟ್ ಚಾನಲಿಂಗ್ ಕೆಲಸ ಮುಗಿಸಿ ಸ್ಕೂಲಿನಿಂದ ಹೊರಗೆ ಬರುತ್ತಿದ್ದಾಗ, ಒಬ್ಬ ಬಾಲಕನು ಓಡಿ ಬಂದು ತನ್ನದೇ ಆದ ರೀತಿಯಲ್ಲಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾ "ಯೋಗವನ್ನು ಕಲಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು" ಎಂದು ಹೇಳಿದ. ಕಾಣದ ಕಣ್ಣೀರಿನ ಹನಿಯೊಂದು ನನ್ನ ಎಡ ಕಣ್ಣಲ್ಲಿ ಮೂಡಿತು. "ಫ್ಲಾರೆನ್ಸ್ ನೈಟಿಂಗೇಲ್"ಳಂತೆ ಆಗಬೇಕೆಂಬ ನನ್ನ ಬಾಲ್ಯದ ಕನಸನ್ನು ಜ್ಞಾಪಿಸಿಕೊಂಡೆ. ನನ್ನ ಆಧ್ಯಾತ್ಮಿಕ ತಂದೆಯವರನ್ನು ನೆನಪಿಸಿಕೊಳ್ಳುತ್ತಾ ಪ್ರಕಾಶಮಾನವಾಗಿ ಬೆಳಗುತ್ತಿದ್ದ ಸೂರ್ಯನನ್ನು ಕೃತಜ್ಞತೆಯಿಂದ ನೋಡಿದೆ. ಮನೆಗೆ ತೆರಳಿದ ತಕ್ಷಣವೇ "ವೈಟ್ ಲಯನ್" ನ ಹಾಡನ್ನು ಬದಲಾಯಿಸಿ ನನ್ನ ಗುರುವಿನ ಮಾತಿನಲ್ಲಿ ಬರೆದೆ.

..... ನನ್ನ ಕೈಯನ್ನು ಹಿಡಿದುಕೋ ನಾನು ಮಾರ್ಗದರ್ಶಿಯಾಗುವೆ
ನಿನ್ನ ಜೀವಿತದುದ್ದಕ್ಕೂ, ನಿನ್ನ ಜೊತೆಯಿರುವೆ
ಯಾವ ಸಾವೂ ನಮ್ಮನ್ನು ಬೇರ್ಪಡಿಸಲಾರದು ಮತ್ತು ನಾನು ನಿನ್ನ ಗೆಳೆಯನಾಗಿರುವೆ
ನನ್ನ ಪ್ರೀತಿಯು ಎಂದೂ ಕೊನೆಯಾಗಲಾರದು ..... ■

## ಲೈಟ್ ಚಾನಲಿಂಗ್ ಕೇಂದ್ರಗಳು

**ಮೈಸೂರು**
ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ, ಹೂಟಗಳ್ಳಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

**ಸೋಲಾಪೂರ್**
ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

**ಚೆನ್ನೈ**
ಭಾನುವಾರ (ಬೆಳಿಗ್ಗೆ 10:00 -10:30) ನಂ. 481, ಸಾಯಿಪ್ರೇಮ್, 19 ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್.


**ತಿರುನಲ್ವೇಲಿ**
ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747 ಶ್ರೀ ಮಾರಿಯಪ್ಪನ್ ಎನ್.


**ಪುಣೆ**
ಶನಿವಾರ (ಸಂಜೆ 6.30 - 7.00)
3 B, ಕಪಿಲ ಹೌಸಿಂಗ್ ಸೊಸೈಟಿ, ಗೋಖಲೆನಗರ, ಪುಣೆ - 411016
☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ, ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್, ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

**ವಿಶಾಖಪಟ್ಟಣ**
ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207, ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್, ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

**ಮೀರಜ್**
ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಷ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್
















## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲಿಂಗ್ ಅಭ್ಯಾಸದ ಮೊದಲು ಚಿಕ್ಕ ಚಿಕ್ಕ ಕಾರಣಗಳಿಗೆ ಕೂಡ ನಾನು ಕೋಪ ಮಾಡಿಕೊಳ್ಳುತ್ತಿದ್ದೆ. ಈಗ ನನ್ನ ಕೋಪವನ್ನು ಹತೋಟಿಯಲ್ಲಿಡಲು ಸಾಧ್ಯವಾಗಿದೆ. ಮುಂಚೆ ನನಗೆ ಬಹಳ ಭಯವಿತ್ತು. ಈಗ ನಿಧಾನವಾಗಿ ಭಯ ಕಡಿಮೆಯಾಗುತ್ತಿದೆ. ಈ ತಂತ್ರವನ್ನು ಕಲಿಸಿಕೊಟ್ಟ ಮಾನಸ ಫೌಂಡೇಷನ್‌ಗೆ ನನ್ನ ವಂದನೆಗಳು.

–ಪುಷ್ಪ ಎಚ್, 10ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಸುಂಕೇನಹಳ್ಳಿ, (ಬೆಂಗಳೂರು)

ಲೈಟ್ ಚಾನಲಿಂಗ್ ಅಭ್ಯಾಸ ನನ್ನ ಮನಸ್ಸು ಮತ್ತು ಶರೀರಕ್ಕೆ ವಿಶ್ರಾಂತಿ ಮತ್ತು ಉಲ್ಲಾಸವನ್ನು ನೀಡುತ್ತದೆ. ಒಮ್ಮೆ ನನ್ನ ಭುಜಗಳಲ್ಲಿ ಬಹಳ ನೋವಿತ್ತು. ಡಾಕ್ಟರ್‌ರನ್ನು ಸಂಪರ್ಕಿಸಿದರೂ ನೋವು ಕಡಿಮೆಯಾಗಲಿಲ್ಲ. ಸತತವಾಗಿ ಲೈಟ್ ಚಾನಲಿಂಗ್ ಮಾಡಿದೆ. ಬೆಳಕು ನನ್ನ ಶರೀರದಲ್ಲಿ ಹಾದು ಹೋಗುತ್ತಿರುವಾಗ ಭುಜಗಳಲ್ಲಿನ ನೋವು ನಿಧಾನವಾಗಿ ಕಡಿಮೆಯಾಗುತ್ತಿದೆ ಎಂದು ಕಲ್ಪಿಸಿಕೊಂಡೆ. ಇದು ನನಗೆ ಸಹಾಯ ಮಾಡಿತು. ನಮ್ಮ ಪರೀಕ್ಷೆಯ ದಿನವೂ ಸಹ ಲೈಟ್ ಚಾನಲ್ ಮಾಡುತ್ತೇವೆ. ಹೆಚ್ಚು ಗಮನ ಹರಿಸಲು ಮತ್ತು ಏಕಾಗ್ರತೆಯಿಂದ ಇರಲು ಅದು ಸಹಾಯ ಮಾಡುತ್ತದೆ ಹಾಗೂ ನಮ್ಮನ್ನು ಉದ್ವೇಗ ಮುಕ್ತರನ್ನಾಗಿಸುತ್ತದೆ.

–ಪ್ರವಲಿಖ ಸಿ, 10ನೇ ತರಗತಿ, ಕೋನನ್ ಕ್ರೈಸ್ಟ್ ಪಬ್ಲಿಕ್ ಸ್ಕೂಲ್, ಬೆಂಗಳೂರು

ಲೈಟ್ ಚಾನಲಿಂಗ್ ನನ್ನ ಆಯಾಸವನ್ನು ಪರಿಹಾರ ಮಾಡುತ್ತದೆ. ಬೆಳಗಿನ ಸಮಯದಲ್ಲಿ ನನ್ನ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ. ನನ್ನ ಸಾಹಿತ್ಯಕ ಚಟುವಟಿಕೆಗಳನ್ನು ಮತ್ತು ನನ್ನ ಎಲ್ಲ ಜವಾಬ್ದಾರಿಗಳನ್ನು ಚೆನ್ನಾಗಿ ನಿರ್ವಹಿಸುತ್ತೇನೆ. ನಾನು ಹೊಸದನ್ನು ಕಲಿಯುತ್ತಿರುವ ಭಾವನೆಯನ್ನು ಹಾಗೂ ಪ್ರತಿದಿನವೂ ವಿವೇಕವನ್ನು ಅದು ನೀಡುತ್ತದೆ. ತನ್ನ ಚೈತನ್ಯಗಳನ್ನು ನನಗೆ ನೀಡಿದ ಬೆಳಕಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

– ಪ್ರಣತಿ ಸಿ, 8ನೇ ತರಗತಿ, ಕೋನಾನ್ ಕ್ರೈಸ್ಟ್ ಪಬ್ಲಿಕ್ ಸ್ಕೂಲ್, ಬೆಂಗಳೂರು

ನಾನು ಸಿದ್ಧಿವಿನಾಯಕ ದೇವಸ್ಥಾನದ ಅರ್ಚಕ. ನನ್ನ ಸಹೋದರ ಡೆಂಗ್ಯು ಜ್ವರದಿಂದ ಬಳಲುತ್ತಿದ್ದು, ತೀವ್ರ ನಿಗಾ ಘಟಕದಲ್ಲಿ ಇದ್ದರು. ಬಾಲ್ಯಾವಸ್ಥೆಯ ಅನಾರೋಗ್ಯದ ಕಾರಣ ಆತನ ದೇಹ, ಈಗ ಕೊಡುತ್ತಿದ್ದ ಔಷಧಿಯನ್ನು ಸ್ವೀಕರಿಸುತ್ತಿಲ್ಲವೆಂದು ಡಾಕ್ಟರ್ ಹೇಳಿದರು. ಆಗ, ಲೈಟ್ ಚಾನಲ್ ಅಭ್ಯಾಸ ಮಾಡುವ ಒಬ್ಬ ಹಿರಿಯ ಮಹಿಳೆ ನಿಮ್ಮ ಸಹೋದರನಿಗಾಗಿ ನಾನು ಪ್ರಾರ್ಥಿಸುತ್ತೇನೆ ಎಂದು ಹೇಳಿದರು. ಜಾದು ನಡೆದಂತೆ ಮರುದಿನವೇ ನನ್ನ ಸಹೋದರನ ಪ್ಲೇಟ್‌ಲೆಟ್ ಪ್ರಮಾಣದಲ್ಲಿ ಗಣನೀಯ ಏರಿಕೆ ಯಾಯಿತು. ಈಗ ಆರೋಗ್ಯವಾಗಿದ್ದಾರೆ. ಆ ಹಿರಿಯ ಮಹಿಳೆಗೆ ಮತ್ತು ಲೈಟ್ ಚಾನಲಿಂಗ್‌ಗೆ ನನ್ನ ಕೃತಜ್ಞತೆಗಳು. ಈಗ ನಾನು ಪ್ರತಿದಿನ ಲೈಟ್ ಚಾನಲ್ ಮಾಡುತ್ತೇನೆ.

–ಹರಿ ಪ್ರಸಾದ್ ಶರ್ಮ, ಲೈಟ್ ಚಾನಲಿಂಗ್ ಕೇಂದ್ರದ ಸದಸ್ಯ, ಸಿದ್ಧಿವಿನಾಯಕ ದೇವಸ್ಥಾನ, ಬೆಂಗಳೂರು

ಲೈಟ್ ಚಾನಲಿಂಗ್ ಅಭ್ಯಾಸದ ಬಗ್ಗೆ ನನಗೆ ಪೂರ್ಣವಾಗಿ ಅರ್ಥವಾಗಿರದಿದ್ದರೂ, ನಾನು ಬೆಳಕಿನ ಮೌಲ್ಯಗಳಾದ ಪ್ರೀತಿ, ಶಾಂತಿ ಮತ್ತು ಆನಂದಗಳ ಜೊತೆ ಸಂಪರ್ಕಗೊಂಡೆ. ಶೀಘ್ರದಲ್ಲೇ ನನ್ನ ಹೃದಯದಿಂದ ಚೈತನ್ಯಗಳು ಹರಡಲಾರಂಭಿಸಿದವು.

–ಸಹೋದರಿ ಜೆಸಿಂತಾ ವಿಕ್ಟೋರಿಯ, ಮುಖ್ಯೋಪಾಧ್ಯಾಯಿನಿ, ಸಂತ ಆಂತೋನಿ ಬಾಲಕಿಯರ ಶಾಲೆ, ಆರ್. ಎ. ಪುರಮ್

ನನ್ನ ಅಜ್ಜ ತೀರಿಕೊಂಡ ಕಾರಣ ಶಾಲೆಗೆ ಹೋಗುವಾಗ ನಾನು ದುಃಖಿತಪ್ತನಾಗಿದ್ದೆ. ಲೈಟ್ ಚಾನಲಿಂಗ್ ಅಭ್ಯಾಸ ನನ್ನ ದುಃಖವನ್ನು ದೂರ ಮಾಡಿತು.

–ವಿದ್ಯಾರ್ಥಿ, ಸಂತ ಆಂತೋನಿ ಬಾಲಕಿಯರ ಶಾಲೆ, ಆರ್. ಎ. ಪುರಮ್

ನಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಯುತ್ತಿದ್ದಾಗ ಆ ದಿನದ ಕಾರ್ಯಕ್ರಮಗಳ ಬಗ್ಗೆ ನನ್ನ ಮನಸ್ಸಿನಲ್ಲಿ ಬಹಳ ಆತಂಕವಿತ್ತು. ನಮ್ಮ ವಿದ್ಯಾರ್ಥಿಗಳಿಗಾಗಿ ಕೆಲವು ತರಗತಿಗಳನ್ನು ನಾನು ನಡೆಸಬೇಕಾಗಿತ್ತು. ನಮ್ಮ ಉತ್ತಮ ವಿದ್ಯಾರ್ಥಿಗಳಲ್ಲೊಬ್ಬನನ್ನು ಡೆಂಗ್ಯು ಜ್ವರದ ಕಾರಣ ಆಸ್ಪತ್ರೆಗೆ ಸೇರಿಸಲಾಗಿತ್ತು. ನಮ್ಮ ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳ ಜೊತೆಗೆ ನಾನು ಕಣ್ಮುಚ್ಚಿ ಬೆಳಕಿಗೆ ಗೌರವವನ್ನು ಅರ್ಪಿಸುತ್ತಿದ್ದೆ. ಬೆಳಕು ನನ್ನ ತಲೆಯ ಮೇಲಿಂದ ಬಂದು ಎಲ್ಲಾ ದಿಕ್ಕುಗಳಿಗೂ ಹರಡಲಾರಂಭಿಸಿತು. ಕೆಲವು ಕ್ಷಣಗಳ ಬಳಿಕ ಕಣ್ಣು ತೆರೆದಾಗ ನನ್ನ ಮನಸ್ಸಿನಲ್ಲಿ ಯಾವುದೇ ರೀತಿಯ ಆತಂಕ ಗಳಿರಲಿಲ್ಲ, ಮನಸ್ಸು ಸಂಪೂರ್ಣವಾಗಿ ಬರಿದಾಗಿತ್ತು. ನಾನು ಹಗುರವಾದಂತೆ ಭಾಸವಾಯಿತು ಮತ್ತು ನನ್ನ ಹೃದಯ ಸಂತೋಷದಿಂದ ತುಂಬಿತ್ತು. ಈ ಅದ್ಭುತವಾದ ತಂತ್ರವನ್ನು ಕಲಿಸಿಕೊಟ್ಟ ನಿಮಗೆ ವಂದನೆಗಳು.

– ಶ್ರೀಮತಿ ಲೀಲಾ ಪಾಂಡಿಯನ್, ಪ್ರಾಂಶುಪಾಲರು, ತೆರೇಸ ಪಬ್ಲಿಕ್ ಸ್ಕೂಲ್, ವಿಜಯ ಬ್ಯಾಂಕ್ ಲೇಔಟ್, ಬೆಂಗಳೂರು

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು ; ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ